**ಶಾಲಾ ನಾಯಕತ್ವ: ಪೋಷಕರನ್ನು ಒಳಗೊಳ್ಳುವುದು**

| ಕನ್ನಡ |
|---|
| ನಾವು ಪೋಷಕ-ಶಿಕ್ಷಕರ ಸಭೆ ವ್ಯವಸ್ಥೆಗೊಳಿಸಿದರೆ, ಕೇವಲ ಕೆಲವೇ ಪೋಷಕರು ಬರುತ್ತಾರೆ.<br>ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಪೋಷಕರು ಪೋಷಕ-ಶಿಕ್ಷಕರ ಸಭೆಗಳಿಗೆ ಪ್ರಾಮುಖ್ಯತೆ ನೀಡುವುದಿಲ್ಲ.<br>ಅವರು ಮೊದಲನೆಯ ಸಭೆಗೆ ಬರಲಿಲ್ಲ, ಆದರೆ ಅವರು ಎರಡನೆಯ ಸಭೆಗೆ ಬಂದರು.<br>ನಾವು ಅವರೊಂದಿಗೆ ಮಕ್ಕಳ ಶಾಲಾ ಕೆಲಸಗಳು ಮತ್ತು ಅವರ ಹಾಜರಾತಿಯ ಬಗ್ಗೆ ಮಾತನಾಡಿದೆವು, ಆದರೆ ಅವರು ಮಕ್ಕಳಿಗೆ ಮನೆಯಲ್ಲಿ ಬೇರೆ ಕೆಲಸವಿರುವುದರಿಂದ, ಮಕ್ಕಳನ್ನು ಶಾಲೆಗೆ ಕಳುಹಿಸಲಾಗುವುದಿಲ್ಲ ಎಂದು ಹೇಳಿದರು.<br>ನಾವು ಪೋಷಕರಿಗೆ ಅವರ ಮಕ್ಕಳ ಶಾಲೆಯ ಪ್ರಾಮುಖ್ಯತೆಯ ಕುರಿತು ವಿವರಿಸಿದೆವು.<br>ನಮ್ಮ ಹೆಚ್ಚಿನ ಪೋಷಕರು ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿದಿದ್ದಾರೆ, ಆದರೆ ಅವರು ಅಶಿಕ್ಷಿತರಾದ್ದರಿಂದ ಅವರು ಅದರಲ್ಲಿ ಯಾವ ಪಾತ್ರ ವಹಿಸಬೇಕೆಂದು ಅವರಿಗೆ ತಿಳಿದಿಲ್ಲ, ಇದರಿಂದ ನಾವು ಅವರಿಗೆ ವಿವರಿಸಬೇಕಾಯಿತು.<br>ಸಮುದಾಯದಲ್ಲಿ ಬದಲಾವಣೆ ತರಬಹುದಾದ ಕೆಲವು ಪೋಷಕರನ್ನು ಗುರುತಿಸಿ, ಅವರೊಂದಿಗೆ ಫೋನ್ ನಲ್ಲಿ ನಿಯಮಿತವಾಗಿ ಮಾತನಾಡಿದೆವು.<br>ಅಕಸ್ಮಾತ್ ಒಂದು ಮಗು ಶಾಲೆಗೆ ಅನೇಕ ದಿನಗಳಿಂದ ಬರಲಿಲ್ಲವೆಂದರೆ ಮತ್ತು ಪೋಷಕರೂ ಸ್ಪಂದಿಸದಿದ್ದರೆ, ನಾವು ಶಾಲೆಯಲ್ಲಿನ ಒಂದು ಮಗುವಿನ ಮೂಲಕ ಆ ವಿದ್ಯಾರ್ಥಿ ಅನೇಕ ದಿನಗಳಿಂದ ಶಾಲೆಗೆ ಬಂದಿಲ್ಲ, ರಜಾಚೀಟಿಯನ್ನೂ ಸಹ ಕಳುಹಿಸಿಲ್ಲ ಸಮಸ್ಯೆ ಏನು? ಎಂದು ಕೇಳುತ್ತೇವೆ' ಮಗುವಿನ ಸ್ನೇಹಿತರು ಅಥವಾ ನೆರೆಮನೆಯವರು ನಮಗೆ ಕಾರಣ ನೀಡಿದರೆ ನಾವು ಈ ಕುರಿತು ಖಚಿತಪಡಿಸಲು ಪೋಷಕರನ್ನು ಸಂಪರ್ಕಿಸುತ್ತೇವೆ.<br>ನಾವು ಸಾಮಾನ್ಯವಾಗಿ ಪ್ರತೀ ಹಳ್ಳಿಯಲ್ಲೂ ಒಂದಿಬ್ಬರು ಪೋಷಕರೊಂದಿಗೆ ಸಂಪರ್ಕದಲ್ಲಿರುತ್ತೇವೆ.<br>ಅವರು ಮಗುವಿನ ಮನೆಗೆ ಹೋಗಿ ಅವರಿಗೆ ನಮ್ಮ ಸಂದೇಶ ತಿಳಿಸುತ್ತಾರೆ.<br>ನಂತರ ನಾವು ಮಗುವಿನ ಪೋಷಕರನ್ನು ಶಾಲೆಗೆ ಆಹ್ವಾನಿಸುತ್ತೇವೆ.<br>ಅವರು ಬಂದರೆ, ಸರಿ. ಆದರೆ ಪೋಷಕರನ್ನು ಶಾಲಗೆ ಬರುವಂತೆ ಮಾಡುವುದು ದೊಡ್ಡ ಸವಾಲು. ಅವರು ಬರಲು ಇಷ್ಟಪಡುವುದಿಲ್ಲ.<br>ಆದರೆ ನಾವು ಅವರಿಗೆ ಗೌರವದಿಂದ ಆಹ್ವಾನಿಸುವುದರಿಂದ ಅವರು ಈಗ ಬರಲು ಆರಂಭಿಸಿದ್ದಾರೆ.<br>ಅವರು ಬಂದಾಗ ನಾವು ಅವರಿಗೆ ಕುಳಿತುಕೊಳ್ಳಲು ಹೇಳ್ತೇವೆ . ಅವರೊಂದಿಗೆ ಸ್ವಲ್ಪ ಸಮಯ ಮಾತಾಡ್ತೇವೆ.<br>ನಾವು ಗ್ರಾಮಸ್ಥರಿಗೆ ಅವರ ವೈಯಕ್ತಿಕ ಸಮಸ್ಯೆಯ ಕುರಿತು ಕೇಳಿದರೆ, ಅದರ ಕುರಿತು ಸ್ವಲ್ಪಮಾತ್ರ ಹೇಳುತ್ತಾರೆ. ನಂತರ ನಾವು ಅವರ ಸಮಸ್ಯೆಯನ್ನು ಪರಿಹರಿಸುತ್ತೇವೆ.<br>ಉದಾಹರಣೆಗೆ, 10 ನೇ ತರಗತಿಯಲ್ಲಿ ಒಬ್ಬಳು ಬಾಲಕಿಯಿದ್ದಾಳೆ. ಆಕೆಯ ತಾಯಿ ಇಲ್ಲಿಗೆ ಬಂದರು. ವಿವಾಹ ಸಂಬಂಧ ಶಾಪಿಂಗ್ ಹೋಗಬೇಕಾದ್ರಿಂದ ಅವಳನ್ನು ಬೇಗನೇ ಕರೆದೊಯ್ಯಲು ಬಯಸಿದರು. ಅವಳಿಗೆ ಎರಡು ದಿನಗಳ ರಜೆಯ |

ಅವಶ್ಯಕತೆ ಇದೆ ಅಂತನೂ ತಿಳಿಸಿದರು.

ಅವರು ಹತ್ತಿರದ ಹಳ್ಳಿಯಲ್ಲಿರುವ  ಸಂಬಂಧಿಕರ ಸ್ಥಳದಲ್ಲಿ ಮದುವೆ ಎಂದು ಹೇಳಿದರು.

ಶಾಲೆಯಲ್ಲಿ ರಜೆ ನೀಡುವಂತೆ ಮನವಿ ಮಾಡಲು ಬಾಲಕಿ ತಾಯಿಗೆ ತಿಳಿಸಿದಳು. ನಾನು ಕೇವಲ ನಾಲ್ಕರಿಂದ ಐದು ಕಿಲೋಮೀಟರ್ ದೂರದಲ್ಲಿ ನಡೆಯುವ ಮದುವೆಗಾಗಿ ಮಗಳನ್ನು ಏಕೆ ಶಾಲೆ ತಪ್ಪಿಸುತ್ತೀರಿ ಎಂದು ಕೇಳಿದೆ.

'ಅವಳು 10 ನೇ ತರಗತಿಯಲ್ಲಿದ್ದಾಳೆ.  ಅವಳು ಶಾಲೆಯಲ್ಲಿ ಬೋಧನೆ ತಪ್ಪಿಸಬಾರದು. ಇಲ್ಲವಾದರೆ ನೀವು ಅವಳಿಗೆ ಮನೆಯಲ್ಲಿ ಹೇಳಿಕೊಡಲು ಸಾಧ್ಯ ಆಗೋದಿಲ್ಲ.

ಅದು ಕೇವಲ 4 ಕಿಲೋಮೀಟರ್ ದೂರದಲ್ಲಿದೆ, ನೀವು ಸಾಯಂಕಾಲ ಹೋಗಿ ರಾತ್ರಿ ಮರಳಬಹುದು ಎಂದು ತಿಳಿಸಿದೆ.'

ಬಾಲಕಿ ಎರಡೂ ದಿನನೂ ಶಾಲೆಗೆ ಬಂದಳು, ಯಾವುದೇ ರಜೆ ತೆಗೆದುಕೊಳ್ಳಲಿಲ್ಲ.